ಶಿಕಾರಿ ಬಂಗಲೆ ಎಂದು ಹೆಸರು. ಆದರೂ ಮಹಾರಾಜರು ಹುಲಿ ಬೇಟೆಯಾಡಲಿಲ್ಲ ಎಂಬುದು ಆಶ್ಚರ್ಯಕರವಾಗಿ ಕಂಡಿತು. ಚಾಮರಾಜನಗರದ ಹಳಬರನ್ನೂ ವಿಚಾರಿಸಿದಾಗ ಮಹಾರಾಜರು ಹುಲಿ ಹೊಡೆದದ್ದು ತಮಗಾರಿಗೂ ತಿಳಿಯದೆಂದೂ, ಬಹಳ ತೊಂದರೆ ಕೊಡುತ್ತಿದ್ದ ಒಂಟಿ ಸಲಗವನ್ನು ಹೊಡೆದು ಉರುಳಿಸಿದ್ದರೆಂದೂ ಮಾಹಿತಿಸಿಕ್ಕಿತು. ಜೊತೆಗೆ 'ಕಾಟಿ' ಅಥವ ಕಾಡು ಕೋಣವನ್ನು ಹೊಡೆದು ಉರುಳಿಸಿದ್ದನ್ನು ನೆನೆಯುತ್ತಾರೆ. ಕಾಡು ಕೋಣದ ತಲೆಯನ್ನು ಹದಮಾಡಿ, ಕೊಂಬುಗಳ ಸಹಿತ ಗೋಡೆಗೆ ಅಲಂಕಾರವಾಗಿ ಸಿಕ್ಕಿಸಲು ಬಳಸುತ್ತಿದ್ದರಂತೆ.

ಮಸಣಮ್ಮನ ಪ್ರಕಾರ ಮಹಾರಾಜರಿಗೆ ಕಾಡಿನಲ್ಲಿ ಸುತ್ತುವುದು ಎಂದರೆ ಬಹಳ ಇಷ್ಟ. ಅವರು ಜೀಪು ಹತ್ತಿ ದಿನಗಟ್ಟಲೆ ಕಾಡಿನಲ್ಲಿ ಸುತ್ತುತ್ತಿದ್ದರಂತೆ. ಪ್ರಾಣಿಗಳನ್ನು ಸಾಯಿಸುವ ಬಗ್ಗೆ ಅವರಿಗೆ ಅಂಥಾ ಒಲವಿರಲಿಲ್ಲ. ಅವರಿಗೆ ಶಿಕಾರಿ ಮಾಡುವುದಕ್ಕಿಂತ ಕಾಡು–ಮೇಡು ಸುತ್ತಿ ಕಾಡುಪ್ರಾಣಿಗಳ ಚಲನವಲನವನ್ನು ನೋಡುವುದರಲ್ಲಿ ಬಹಳ ಆಸಕ್ತಿ ಇತ್ತು ಎಂದು ಕಾಣುತ್ತದೆ. ಬಂದೂಕು ಶಿಕಾರಿಗಿಂತ ಆತ್ಮ ರಕ್ಷಣೆಯ ಸಾಧನವಾಗಿ ಉಪಯೋಗವಾಗುತ್ತಿತ್ತು ಅಷ್ಟೆ. ಅದನ್ನು ಬಳಸುವ ಸಂದರ್ಭ ಬಂದಿದ್ದೇ ವಿರಳ. ಕಾಡಿನ ನಡುವೆ ಅಪರೂಪಕ್ಕೆ ತುಪಾಕಿ 'ಢಂ' ಎಂದದ್ದನ್ನು ಮಸಣಮ್ಮ ನೆನಪಿಸಿಕೊಂಡು " ಅದು ಪ್ರಾಣಿಗಳನ್ನು ಬೆದರಿಸಿ ಓಡಿಸೋದುಕ್ಕೆ" ಎಂದು ವಿವರಣೆ ನೀಡಿದಳು.

ಮಹಾರಾಜರು ಪ್ರಾಣಿಗಳನ್ನು ಶಿಕಾರಿ ಮಾಡದಿದ್ದರೂ ಕೆಲವೊಂದು ಪ್ರಾಣಿಗಳನ್ನು ಹಿಡಿದು ಮೈಸೂರಿನ ಮೃಗಾಲಯಕ್ಕೆ ಕಳುಹಿಸಿದ್ದನ್ನು ಮಸಣಮ್ಮ ಮತ್ತು ಅವಳ ಮಗಳು ನೆನೆಯುತ್ತಾರೆ. ಕಾಡಿನಲ್ಲಿ ಬೃಹತ್‌ಗಾತ್ರದ ಅಜಗರ 'ಮುಜುಗರ' ಪಟ್ಟುಕೊಂಡು ಬಿದ್ದಲ್ಲೇ ಬಿದ್ದಿತ್ತಂತೆ. 'ಮುಜುಗರ' ಪದವನ್ನೂ ಸೋಲಿಗರು ಅನೇಕ ಪರ್ಯಾಯ ಅರ್ಥಗಳಲ್ಲಿ ಬಳಸುವುದುಂಟು. ಈ ಹೆಬ್ಬಾವು 'ಮುಜುಗರ ಪಟ್ಟುಕೊಂಡು' ಎಂದರೆ ನಿಸ್ಸಹಾಯಕವಾಗಿ ಬಿದ್ದಿತಂತೆ. ಈ ವರ್ತಮಾನ ಸಿಕ್ಕ

